www.ecourtsindia.com

3 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಭದ್ರಾವತಿ.

ಸಿ.ಸಿ.ಸಂಖ್ಯೆ: 4294/2024

| | | |
|---|---|---|
| ಸಾಕ್ಷಿದಾರರ ಹೆಸರು | ಸೋಮಶೇಖರ್ | ಪಿ.ಡಬ್ಲ್ಯೂ: 01 |
| ತಂದೆಯ ಹೆಸರು | ರಾಮಾನಾಯ್ಕ | |
| ವಯಸ್ಸು | 51 ವರ್ಷ | |
| ಉದ್ಯೋಗ | ಎಎಸ್ಐ ಹೊಸಮನೆ ಪೋಲೀಸ್ ಠಾಣೆ | |
| ವಾಸಸ್ಥಳ | ಭದ್ರಾವತಿ | |

ಪ್ರಮಾಣ ವಚನದ ನಂತರ ದಿಃ-26.05.2025

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು**

ಮುಖ್ಯ ವಿಚಾರಣೆಃ ಸಸಅ ರವರಿಂದ,

ಜೂನ್ 2021 ರಿಂದ ಇಲ್ಲಿಯವರೆಗೆ ಹೊಸಮನೆ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 16.12.2024 ರಂದು ಮಾನ್ಯ ನ್ಯಾಯಾಲಯ ಹೊರಡಿಸಿದ ಉದ್ಘೋಷಣಾ ಆದೇಶದ ಮೇರೆಗೆ ಪಂಚರನ್ನು ಬರಮಾಡಿಕೊಂಡು ಸಂಜೆ 5 ರಿಂದ 6 ಗಂಟೆವರೆಗೆ ಕಾಳಿಂಗನ ಬಸ್ಸು ನಿಲ್ದಾಣದ ಬಳಿ ಪಂಚರಾದ ವಸಂತ್ ಕುಮಾರ್ ಬಿನ್ ಕೃಷ್ಣಪ್ಪಗೌಡ ಕಾಳಿಂಗನಹಳ್ಳಿ ಕ್ಯಾಂಪ್, ಭದ್ರಾವತಿ , ಆರ್. ಗೋಪಾಲ್ ತಂದೆ ಲೇಟ್ ರಂಗಸ್ವಾಮಿ , ವಾಸ ಮೂರನೇ ಕ್ರಾಸ್ ಕಾಳಿಂಗನಹಳ್ಳಿ ಭದ್ರಾವತಿ ಇವರ

This is a True Copy of the Court Records Online. Authenticated @ districts.ecourtsindia.com/cnr/KASM310054622024/truecopy/order-1.pdf

ಸಮಕ್ಷಮದಲ್ಲಿ ವಾರೆಂಟ್ ನಲ್ಲಿ ನಮೂದಿಸಿದ ವಿಳಾಸದಲ್ಲಿ ಉದ್ಘೋಷಣ ವಾರೆಂಟ್ ನ್ನು ಜಾರಿ ಮಾಡಿರುತ್ತೇನೆ ಹಾಗೂ ನ್ಯಾಯಾಲಯದಿಂದ ಬಂದ ವಾರೆಂಟ್ ನ ಜೆರಾಕ್ಸ್ ಪ್ರತಿಯನ್ನು ಕಾಳಿಂಗನಹಳ್ಳಿ ಬಸ್ಸು ನಿಲ್ದಾಣದ ಗೋಡೆಗೆ ಸಾರ್ವಜನಿಕ ಸ್ಥಳದಲ್ಲಿ ಲಗತ್ತಿಸಿ ಪಂಚನಾಮೆ ಜರುಗಿಸಿರುತ್ತೇನೆ. ದಿನಾಂಕ 27.01.2025 ರಂದು ಆರೋಪಿಗೆ ಸೇರಿದ ಯಾವುದಾದರೂ ಸ್ಥಿರ ಮತ್ತು ಚರ ಆಸ್ತಿಯ ಬಗ್ಗೆ ಮಾಹಿತಿ ನೀಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಾಳಿಂಗನಹಳ್ಳಿ ಪಂಚಾಯಿತಿಯವರಿಗೆ ಆರೋಪಿಯ ಆಸ್ತಿ ವಿವರಣೆ ಕೇಳಿ ಮನವಿ ಪತ್ರ ಸಲ್ಲಿಸಿರುತ್ತೇನೆ. ದಿ 21.02.2025 ರಂದು ಆರೋಪಿಗೆ ಯಾವುದೇ ಸ್ಥಿರ ಮತ್ತು ಚರ ಆಸ್ತಿ ಇರುವುದಿಲ್ಲ ಎಂದು ಪಂಚಾಯಿತಿಯವರು ವರದಿಯನ್ನು ನೀಡಿರುತ್ತಾರೆ. ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಸಾಕ್ಷಿದಾರರು ಉದ್ಘೋಷಣಾ ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಉದ್ಘೋಷಣಾ ಪಂಚನಾಮೆಯನ್ನು ನಿಪಿ–1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ವರದಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 3(ಎ) ಗುರುತಿಸಲಾಯಿತು.

This is a True Copy of the Court Records Online. Authenticated @ districts.ecourtsindia.com/cnr/KASM310054622024/truecopy/order-1.pdf

(ಮರು ವಿಚಾರಣೆ ಇಲ್ಲ.)

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಶ್ರುತಿ ಕೆ ಎಸ್ .)
3 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ, ಭದ್ರಾವತಿ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KASM310054622024/truecopy/order-1.pdf